ಬೆಂ.ಮ.ಪ್ರ.ಪ್ರಾ.

# ಗ್ರೇಟರ್ ಬೆಂಗಳೂರು - ಬಿಡದಿ ಸ್ಮಾರ್ಟ್ ಸಿಟಿ ಯೋಜನಾ ಪ್ರಾಧಿಕಾರ

ಬೆಂಗಳೂರು ಮಹಾನಗರ ಪ್ರದೇಶಾಭಿವೃದ್ಧಿ ಪ್ರಾಧಿಕಾರ, ನಂ. 1, ಆಲಿ ಆಸ್ಕರ್ ರಸ್ತೆ, ಬೆಂಗಳೂರು – 560 052

ಸಂಖ್ಯೆ: **BMRDA/LAO/02/2015-16** ದಿನಾಂಕ:15/12/2017

## ಅಂತಿಮ ವಸತಿ ವಿನ್ಯಾಸ ಅನುಮೋದನಾ ಪತ್ರ

## (ಕರ್ನಾಟಕ ನಗರ ಮತ್ತು ಗ್ರಾಮಾಂತರ ಯೋಜನಾ ಕಾಯ್ದೆ 1961ರ ಕಲಂ 17(2) ರಡಿಯಲ್ಲಿ)

ವಿಷಯ : ರಾಮನಗರ ತಾಲ್ಲೂಕು, ಕಸಬಾ ಹೋಬಳಿ, ಮಾಯಗಾನಹಳ್ಳಿ ಗ್ರಾಮದ ಸ.ನಂ. 41/1ರಲ್ಲಿ 0–31.08ಗುಂಟೆ, 41/2ರಲ್ಲಿ 0–26.08ಗುಂಟೆ, 41/4ರಲ್ಲಿ 0–27ಗುಂಟೆ, 42/1ರಲ್ಲಿ 0–20ಗುಂಟೆ, 43/2ರಲ್ಲಿ 0–18ಗುಂಟೆ, 43/3ರಲ್ಲಿ 0–20ಗುಂಟೆ, 43/4ರಲ್ಲಿ 35ಗುಂಟೆ, 43/5ರಲ್ಲಿ 0–15ಗುಂಟೆ, 43/7ರಲ್ಲಿ 0–15ಗುಂಟೆ, 43/8ರಲ್ಲಿ 0–15ಗುಂಟೆ, 43/9ರಲ್ಲಿ 0–35ಗುಂಟೆ, 43/10 ರಲ್ಲಿ 0–02ಗುಂಟೆ, 44/2ರಲ್ಲಿ 0–16ಗುಂಟೆ, 44/4ರಲ್ಲಿ 15ಗುಂಟೆ, 44/5ರಲ್ಲಿ 0–08ಗುಂಟೆ, 61/1ರಲ್ಲಿ 0–23.08ಗುಂಟೆ, 61/2ರಲ್ಲಿ 0–21ಗುಂಟೆ, 61/3ರಲ್ಲಿ 0–30ಗುಂಟೆ, 61/4ರಲ್ಲಿ 0–11ಗುಂಟೆ, 61/5ರಲ್ಲಿ 0–08.08ಗುಂಟೆ, 61/6ರಲ್ಲಿ 1ಎಕರೆ 09ಗುಂಟೆ, 61/7ರಲ್ಲಿ 0–12ಗುಂಟೆ, 61/8ರಲ್ಲಿ 0–23.08 ಗುಂಟೆ, 61/9ರಲ್ಲಿ 11ಗುಂಟೆ, 61/10ರಲ್ಲಿ 0–25ಗುಂಟೆ, 61/11ರಲ್ಲಿ 0–11.08ಗುಂಟೆ, 62/1ರಲ್ಲಿ 2ಎಕರೆ 18ಗುಂಟೆ, 62/2ರಲ್ಲಿ 1ಎಕರೆ 04ಗುಂಟೆ, 62/3ರಲ್ಲಿ 0–23ಗುಂಟೆ, 62/4ರಲ್ಲಿ 1ಎಕರೆ 25ಗುಂಟೆ, 62/5ರಲ್ಲಿ 0–26ಗುಂಟೆ, 62/6ರಲ್ಲಿ 0–24ಗುಂಟೆ, 63/1ರಲ್ಲಿ 3ಎಕರೆ 17.08ಗುಂಟೆ, 63/2ರಲ್ಲಿ 3ಎಕರೆ 26.08ಗುಂಟೆ, 64/3ರಲ್ಲಿ 1ಎಕರೆ 23ಗುಂಟೆ, 64/4ರಲ್ಲಿ 0–20ಗುಂಟೆ, 64/5ರಲ್ಲಿ 0–32ಗುಂಟೆ, 64/6ರಲ್ಲಿ 0–32ಗುಂಟೆ, 65/1ರಲ್ಲಿ 3ಎಕರೆ 28ಗುಂಟೆ, 66/1ರಲ್ಲಿ 2ಎಕರೆ 24ಗುಂಟೆ, 66/2ರಲ್ಲಿ 1ಎಕರೆ 15ಗುಂಟೆ, 66/3ರಲ್ಲಿ 1ಎಕರೆ 11ಗುಂಟೆ, 66/4ರಲ್ಲಿ 1ಎಕರೆ 15ಗುಂಟೆ, 66/5ರಲ್ಲಿ 1ಎಕರೆ 14ಗುಂಟೆ, 67/1ರಲ್ಲಿ 2ಎಕರೆ 33ಗುಂಟೆ, 67/2ರಲ್ಲಿ 2ಎಕರೆ 33ಗುಂಟೆ, ಒಟ್ಟು 48ಎಕರೆ 09ಗುಂಟೆ ವಿಸ್ತೀರ್ಣದ ಜಮೀನಿನಲ್ಲಿ ನೋಂದಣಿ ಉದ್ದೇಶಕ್ಕಾಗಿ ವಸತಿ ವಿನ್ಯಾಸ ನಕ್ಷೆಗೆ ಅಂತಿಮ ಅನುಮೋದನೆ ನೀಡಲು ಕೋರಿರುವ ಬಗ್ಗೆ.

ಉಲ್ಲೇಖ:
1) ಅರ್ಜಿದಾರರ ಮನವಿ ದಿನಾಂಕ: 22/06/2015 & 11/04/2016.
2) ಬೆಂಗಳೂರು ಮಹಾನಗರ ಪ್ರದೇಶಾಭಿವೃದ್ಧಿ ಪ್ರಾಧಿಕಾರಕ್ಕೆ ವಿನ್ಯಾಸ ಅನುಮೋದನಾ ಶುಲ್ಕ ರೂ. 39,43,300.00 ಮತ್ತು ಕೆರೆ ಸಂರಕ್ಷಣಾ ಶುಲ್ಕ ರೂ. 48,22,500.00 ಗಳನ್ನು ಪಾವತಿಸಿದ ರಸೀದಿ ಸಂಖ್ಯೆ: 4551 ಮತ್ತು 4552, ದಿನಾಂಕ: 26/04/2016
3) ಬೆಂಗಳೂರು ಮಹಾನಗರ ಪ್ರದೇಶಾಭಿವೃದ್ಧಿ ಪ್ರಾಧಿಕಾರದ ತಾತ್ಕಾಲಿಕ ವಸತಿ ವಿನ್ಯಾಸ ಅನುಮೋದನಾ ಪತ್ರ ಸಂಖ್ಯೆ: BMRDA/LAO/02/2015-16 ದಿನಾಂಕ: 03/05/2016
4) ಅರ್ಜಿದಾರರ ದಿನಾಂಕ: 16/09/2017ರ ಅರ್ಜಿ.
5) ಪಂಚಾಯಿತಿ ಅಭಿವೃದ್ಧಿ ಅಧಿಕಾರಿಗಳು, ಮಾಯಗಾನಹಳ್ಳಿ ಗ್ರಾಮ ಪಂಚಾಯಿತಿ ಇವರ ಕಛೇರಿ ಪತ್ರ ದಿನಾಂಕ: 18/09/2017
6) ದಿನಾಂಕ: 05/12/2017 ರಂದು ನಡೆದ ಗ್ರೇಟರ್ ಬೆಂಗಳೂರು – ಬಿಡದಿ ಸ್ಮಾರ್ಟ್ ಸಿಟಿ ಯೋಜನಾ ಪ್ರಾಧಿಕಾರದ 5ನೇ ಸಭೆಯ ವಿಷಯ ಸಂಖ್ಯೆ: 5.6ರ ನಡವಳಿಕೆಗಳು.
7) ಗ್ರೇಟರ್ ಬೆಂಗಳೂರು – ಬಿಡದಿ ಸ್ಮಾರ್ಟ್ ಸಿಟಿ ಯೋಜನಾ ಪ್ರಾಧಿಕಾರಕ್ಕೆ ಶುಲ್ಕ ಪಾವತಿಸಿದ ರಸೀದಿ ಸಂಖ್ಯೆ: 34 & 35, ದಿನಾಂಕ: 15/12/2017.

*******

ಮೇಲ್ಕಂಡ ವಿಷಯಕ್ಕೆ ಸಂಬಂಧಿಸಿದಂತೆ, ರಾಮನಗರ ತಾಲ್ಲೂಕು, ಕಸಬಾ ಹೋಬಳಿ, ಮಾಯಗಾನಹಳ್ಳಿ ಗ್ರಾಮದ ಸ.ನಂ. 41/1ರಲ್ಲಿ 0–31.08ಗುಂಟೆ, 41/2ರಲ್ಲಿ 0–26.08ಗುಂಟೆ, 41/4ರಲ್ಲಿ 0–27ಗುಂಟೆ, 42/1ರಲ್ಲಿ 0–20ಗುಂಟೆ, 43/2ರಲ್ಲಿ

0-18ಗುಂಟೆ, 43/3ರಲ್ಲಿ 0-20ಗುಂಟೆ, 43/4ರಲ್ಲಿ 35ಗುಂಟೆ, 43/5ರಲ್ಲಿ 0-15ಗುಂಟೆ, 43/7ರಲ್ಲಿ 0-15ಗುಂಟೆ, 43/8ರಲ್ಲಿ 0-15ಗುಂಟೆ, 43/9ರಲ್ಲಿ 0-35ಗುಂಟೆ, 43/10 ರಲ್ಲಿ 0-02ಗುಂಟೆ, 44/2ರಲ್ಲಿ 0-16ಗುಂಟೆ, 44/4ರಲ್ಲಿ 15ಗುಂಟೆ, 44/5ರಲ್ಲಿ 0-08ಗುಂಟೆ, 61/1ರಲ್ಲಿ 0-23.08ಗುಂಟೆ, 61/2ರಲ್ಲಿ 0-21ಗುಂಟೆ, 61/3ರಲ್ಲಿ 0-30ಗುಂಟೆ, 61/4ರಲ್ಲಿ 0-11ಗುಂಟೆ, 61/5ರಲ್ಲಿ 0-08.08ಗುಂಟೆ, 61/6ರಲ್ಲಿ 1ಎಕರೆ 09ಗುಂಟೆ, 61/7ರಲ್ಲಿ 0-12ಗುಂಟೆ, 61/8ರಲ್ಲಿ 0-23.08 ಗುಂಟೆ, 61/9ರಲ್ಲಿ 11ಗುಂಟೆ, 61/10ರಲ್ಲಿ 0-25ಗುಂಟೆ, 61/11ರಲ್ಲಿ 0-11.08ಗುಂಟೆ, 62/1ರಲ್ಲಿ 2ಎಕರೆ 18ಗುಂಟೆ, 62/2ರಲ್ಲಿ 1ಎಕರೆ 04ಗುಂಟೆ, 62/3ರಲ್ಲಿ 0-23ಗುಂಟೆ, 62/4ರಲ್ಲಿ 1ಎಕರೆ 25ಗುಂಟೆ, 62/5ರಲ್ಲಿ 0-26ಗುಂಟೆ, 62/6ರಲ್ಲಿ 0-24ಗುಂಟೆ, 63/1ರಲ್ಲಿ 3ಎಕರೆ 17.08ಗುಂಟೆ, 63/2ರಲ್ಲಿ 3ಎಕರೆ 26.08ಗುಂಟೆ, 64/3ರಲ್ಲಿ 1ಎಕರೆ 23ಗುಂಟೆ, 64/4ರಲ್ಲಿ 0-20ಗುಂಟೆ, 64/5ರಲ್ಲಿ 0-32ಗುಂಟೆ, 64/6ರಲ್ಲಿ 0-32ಗುಂಟೆ, 65/1ರಲ್ಲಿ 3ಎಕರೆ 28ಗುಂಟೆ, 66/1ರಲ್ಲಿ 2ಎಕರೆ 24ಗುಂಟೆ, 66/2ರಲ್ಲಿ 1ಎಕರೆ 15ಗುಂಟೆ, 66/3ರಲ್ಲಿ 1ಎಕರೆ 11ಗುಂಟೆ, 66/4ರಲ್ಲಿ 1ಎಕರೆ 15ಗುಂಟೆ, 66/5ರಲ್ಲಿ 1ಎಕರೆ 14ಗುಂಟೆ, 67/1ರಲ್ಲಿ 2ಎಕರೆ 33ಗುಂಟೆ, 67/2ರಲ್ಲಿ 2ಎಕರೆ 33ಗುಂಟೆ, ಒಟ್ಟು 48ಎಕರೆ 09ಗುಂಟೆ ವಿಸ್ತೀರ್ಣದ ಜಮೀನಿನಲ್ಲಿ ಉಲ್ಲೇಖ (1) ರಲ್ಲಿನ ಅರ್ಜಿಗಳಲ್ಲಿ ವಸತಿ ವಿನ್ಯಾಸ ಅನುಮೋದನೆ ಕೋರಿ, ಬೆಂಗಳೂರು ಮಹಾನಗರ ಪ್ರದೇಶಾಭಿವೃದ್ಧಿ ಪ್ರಾಧಿಕಾರಕ್ಕೆ ಮನವಿಯನ್ನು ಸಲ್ಲಿಸಲಾಗಿತ್ತು. ಅರ್ಜಿದಾರರು ಉಲ್ಲೇಖ (2) ರಲ್ಲಿ ನಿಗಧಿತ ಶುಲ್ಕವನ್ನು ಬೆಂಗಳೂರು ಮಹಾನಗರ ಪ್ರದೇಶಾಭಿವೃದ್ಧಿ ಪ್ರಾಧಿಕಾರಕ್ಕೆ ಪಾವತಿಸಿದ್ದರು. ಕರ್ನಾಟಕ ನಗರ ಮತ್ತು ಗ್ರಾಮಾಂತರ ಯೋಜನಾ ಕಾಯ್ದೆ 1961ರ ಕಲಂ 17(2ಎ) ರ ಅಡಿಯಲ್ಲಿ ವಸತಿ ವಿನ್ಯಾಸವನ್ನು ಅಭಿವೃದ್ಧಿಪಡಿಸಲು ಉಲ್ಲೇಖ (3) ರಲ್ಲಿನ ಪತ್ರದಲ್ಲಿ ತಾತ್ಕಾಲಿಕ ಅನುಮೊದನೆ ನೀಡಲಾಗಿತ್ತು.

ಸರ್ಕಾರದ ಅಧಿಸೂಚನೆ ಸಂಖ್ಯೆ: ನಅಇ/104/ಬಿಎಂಆರ್/2014 ಬೆಂಗಳೂರು ದಿನಾಂಕ: 03/06/2016 ರಲ್ಲಿ ಗ್ರೇಟರ್ ಬೆಂಗಳೂರು - ಬಿಡದಿ ಸ್ಮಾರ್ಟ್ ಸಿಟಿ ಯೋಜನಾ ಪ್ರದೇಶ ಅಧಿಸೂಚಿಸಲಾಗಿದ್ದು, ಪ್ರಶ್ನಿತ ಜಮೀನು ಗ್ರೇಟರ್ ಬೆಂಗಳೂರು - ಬಿಡದಿ ಸ್ಮಾರ್ಟ್ ಸಿಟಿ ಸ್ಥಳೀಯ ಯೋಜನಾ ಪ್ರದೇಶದಲ್ಲಿರುತ್ತದೆ. ಉಲ್ಲೇಖ (4) ರಲ್ಲಿನ ಅರ್ಜಿಯಲ್ಲಿ ಸದರಿ ವಸತಿ ವಿನ್ಯಾಸದ ಅಭಿವೃದ್ಧಿ ಕಾಮಗಾರಿಗಳನ್ನು ಪೂರ್ತಿಯಾಗಿ ಕಾರ್ಯಗತಗೊಳಿಸಿರುವುದಾಗಿ ತಿಳಿಸುತ್ತಾ, ವಸತಿ ವಿನ್ಯಾಸದ ಅಂತಿಮ ಅನುಮೋದನೆ ಹಾಗೂ ನಿವೇಶನಗಳನ್ನು ನೋಂದಣಿಗಾಗಿ ಬಿಡುಗಡೆ ಮಾಡುವಂತೆ ಕೋರಲಾಗಿರುತ್ತದೆ.

ಅರ್ಜಿದಾರರು ಸದರಿ ವಸತಿ ವಿನ್ಯಾಸದ ವಿದ್ಯುದ್ದೀಕರಣ ಕಾಮಗಾರಿಗಳ ಬಗ್ಗೆ ಮುಖ್ಯ ಅಭಿಯಂತರರು, ಬೆಂಗಳೂರು ಗ್ರಾಮಾಂತರ ಕ್ಷೇತ್ರ ವಲಯ, ಬೆಂಗಳೂರು ವಿದ್ಯುತ್ ಸರಬರಾಜು ಮಂಡಳಿ, ಬೆಂಗಳೂರು ಇವರ ಪ್ರಮಾಣ ಪತ್ರ, ವಸತಿ ಬಡಾವಣೆಯಲ್ಲಿ ಮೂಲಭೂತ ಸೌಕರ್ಯಗಳಾದ ರಸ್ತೆ ಡಾಂಬರೀಕರಣ ಮತ್ತು ಮಳೆ ನೀರಿನ ಚರಂಡಿ ನಿರ್ಮಿಸಿರುವ ಬಗ್ಗೆ ಸಹಾಯಕ ಕಾರ್ಯಪಾಲಕ ಅಭಿಯಂತರರು, ಲೋಕೋಪಯೋಗಿ ಬಂದರು ಮತ್ತು ಒಳನಾಡು ಜಲಸಾರಿಗೆ ಇಲಾಖೆ, ನಂ.1 ಉಪವಿಭಾಗ, ರಾಮನಗರ ಇವರ ಧೃಢೀಕರಣ ಪತ್ರ, ವಿನ್ಯಾಸದಲ್ಲಿನ ಉದ್ಯಾನವನವನ್ನು ಅಭಿವೃದ್ಧಿಪಡಿಸಿರುವ ಬಗ್ಗೆ ಹಿರಿಯ ಸಹಾಯಕ ತೋಟಗಾರಿಕೆ ನಿರ್ದೇಶಕರು (ಜಿ.ಪಂ.), ರಾಮನಗರ ಇವರ ಧೃಢೀಕರಣ ಪತ್ರ, ಒಳಚರಂಡಿ ನೀರು ಶುದ್ಧಿಕರಣ ಘಟಕ ಸ್ಥಾಪಿಸಿರುವ ಬಗ್ಗೆ ಪ್ರಾದೇಶಿಕ ಅಧಿಕಾರಿಗಳು, ಕರ್ನಾಟಕ ರಾಜ್ಯ ಮಾಲಿನ್ಯ ನಿಯಂತ್ರಣಾ ಮಂಡಳಿ, ರಾಮನಗರ ಇವರ ನಿರಾಕ್ಷೇಪಣಾ ಪತ್ರ ಮತ್ತು ಉಲ್ಲೇಖ (5)ರಲ್ಲಿನ ಪತ್ರದಲ್ಲಿ ತಿಳಿಸಿರುವಂತೆ ಸದರಿ ವಸತಿ ವಿನ್ಯಾಸ ನಕ್ಷೆಯಲ್ಲಿನ ಸಾರ್ವಜನಿಕ ಉಪಯೋಗದ ಉದ್ಯಾನವನ & ರಸ್ತೆಗಳನ್ನು ಸ್ಥಳೀಯ ಸಂಸ್ಥೆಯಾದ ಮಾಯಗಾನಹಳ್ಳಿ ಗ್ರಾಮ ಪಂಚಾಯಿತಿಗೆ ದಿನಾಂಕ: 07/09/2017ರಲ್ಲಿ ನೋಂದಾಯಿತ ಪರಿತ್ಯಾಜನಾ ಪತ್ರದ ಮೂಲಕ ಮುಫತ್ತಾಗಿ ಹಸ್ತಾಂತರಿಸಲಾಗಿರುತ್ತದೆ.

ಉಲ್ಲೇಖ (6) ರಲ್ಲಿನ ದಿನಾಂಕ: 05/12/2017 ರಂದು ನಡೆದ ಗ್ರೇಟರ್ ಬೆಂಗಳೂರು - ಬಿಡದಿ ಸ್ಮಾರ್ಟ್ ಸಿಟಿ ಯೋಜನಾ ಪ್ರಾಧಿಕಾರದ 5ನೇ ಸಭೆಯ ವಿಷಯ ಸಂಖ್ಯೆ: 5.6ರ ನಡವಳಿಕೆಯಲ್ಲಿ ರಾಮನಗರ ತಾಲ್ಲೂಕು, ಕಸಬಾ ಹೋಬಳಿ, ಮಾಯಗಾನಹಳ್ಳಿ ಗ್ರಾಮದ ಸ.ನಂ. 41/1ರಲ್ಲಿ 0-31.08ಗುಂಟೆ, 41/2ರಲ್ಲಿ 0-26.08ಗುಂಟೆ ಹಾಗೂ ಇತರೆ ಸ.ನಂ.ಗಳ ಒಟ್ಟು 48ಎಕರೆ 09ಗುಂಟೆ ವಿಸ್ತೀರ್ಣದ ಜಮೀನಿನಲ್ಲಿ ತಾತ್ಕಾಲಿಕ ಅನುಮೋದಿತ ವಸತಿ ವಿನ್ಯಾಸ ನಕ್ಷೆಯ ರೀತ್ಯ ಅಭಿವೃದ್ಧಿಗೊಳಿಸಿ, ಸಲ್ಲಿಸಿರುವ ವಸತಿ ವಿನ್ಯಾಸ ನಕ್ಷೆಗೆ ಕರ್ನಾಟಕ ನಗರ ಮತ್ತು ಗ್ರಾಮಾಂತರ ಯೋಜನಾ ಕಾಯ್ದೆ 1961ರ ಕಲಂ 17(2ಬಿ) ಅಡಿಯಲ್ಲಿ ನೋಂದಣಿ ಉದ್ದೇಶಕ್ಕಾಗಿ ಅಂತಿಮ ಅನುಮೋದನೆ ನೀಡಲು ತೀರ್ಮಾನಿಸಲಾಗಿರುತ್ತದೆ.

..3..

ಮೇಲ್ಕಂಡ ಅಂಶಗಳ ಹಿನ್ನೆಲೆಯಲ್ಲಿ ರಾಮನಗರ ತಾಲ್ಲೂಕು, ಕಸಬಾ ಹೋಬಳಿ, ಮಾಯಗಾನಹಳ್ಳಿ ಗ್ರಾಮದ ಸ.ನಂ. 41/1ರಲ್ಲಿ 0-28.08ಗುಂಟೆ, 41/2ರಲ್ಲಿ 0-26.08ಗುಂಟೆ, 41/4ರಲ್ಲಿ 0-27ಗುಂಟೆ, 42/1ರಲ್ಲಿ 0-20ಗುಂಟೆ, 43/2ರಲ್ಲಿ 0-18ಗುಂಟೆ, 43/3ರಲ್ಲಿ 0-20ಗುಂಟೆ, 43/4ರಲ್ಲಿ 35ಗುಂಟೆ, 43/5ರಲ್ಲಿ 0-15ಗುಂಟೆ, 43/7ರಲ್ಲಿ 0-15ಗುಂಟೆ, 43/8ರಲ್ಲಿ 0-15ಗುಂಟೆ, 43/9ರಲ್ಲಿ 0-35ಗುಂಟೆ, 43/10 ರಲ್ಲಿ 0-02ಗುಂಟೆ, 44/2ರಲ್ಲಿ 0-16ಗುಂಟೆ, 44/4ರಲ್ಲಿ 15ಗುಂಟೆ, 44/5ರಲ್ಲಿ 0-08ಗುಂಟೆ, 61/1ರಲ್ಲಿ 023.08ಗುಂಟೆ, 61/2ರಲ್ಲಿ 0-21ಗುಂಟೆ, 61/3ರಲ್ಲಿ 0-30ಗುಂಟೆ, 61/4ರಲ್ಲಿ 0-11ಗುಂಟೆ, 61/5ರಲ್ಲಿ 0-08.08ಗುಂಟೆ, 61/6ರಲ್ಲಿ 1ಎಕರೆ 09ಗುಂಟೆ, 61/7ರಲ್ಲಿ 0-12ಗುಂಟೆ, 61/8ರಲ್ಲಿ 0-23.08 ಗುಂಟೆ, 61/9ರಲ್ಲಿ 11ಗುಂಟೆ, 61/10ರಲ್ಲಿ 0-25ಗುಂಟೆ, 61/11ರಲ್ಲಿ 0-11.08ಗುಂಟೆ, 62/1ರಲ್ಲಿ 2ಎಕರೆ 18ಗುಂಟೆ, 62/2ರಲ್ಲಿ 1ಎಕರೆ 04ಗುಂಟೆ, 62/3ರಲ್ಲಿ 0-23ಗುಂಟೆ, 62/4ರಲ್ಲಿ 1ಎಕರೆ 25ಗುಂಟೆ, 62/5ರಲ್ಲಿ 0-26ಗುಂಟೆ, 62/6ರಲ್ಲಿ 0-24ಗುಂಟೆ, 63/1ರಲ್ಲಿ 3ಎಕರೆ 17.08ಗುಂಟೆ, 63/2ರಲ್ಲಿ 3ಎಕರೆ 26.08ಗುಂಟೆ, 64/3ರಲ್ಲಿ 1ಎಕರೆ 23ಗುಂಟೆ, 64/4ರಲ್ಲಿ 0-20ಗುಂಟೆ, 64/5ರಲ್ಲಿ 0-32ಗುಂಟೆ, 64/6ರಲ್ಲಿ 0-32ಗುಂಟೆ, 65/1ರಲ್ಲಿ 3ಎಕರೆ 28ಗುಂಟೆ, 66/1ರಲ್ಲಿ 2ಎಕರೆ 24ಗುಂಟೆ, 66/2ರಲ್ಲಿ 1ಎಕರೆ 15ಗುಂಟೆ, 66/3ರಲ್ಲಿ 1ಎಕರೆ 11ಗುಂಟೆ, 66/4ರಲ್ಲಿ 1ಎಕರೆ 15ಗುಂಟೆ, 66/5ರಲ್ಲಿ 1ಎಕರೆ 14ಗುಂಟೆ, 67/1ರಲ್ಲಿ 2ಎಕರೆ 33ಗುಂಟೆ, 67/2ರಲ್ಲಿ 2ಎಕರೆ 33ಗುಂಟೆ, ಒಟ್ಟು 48ಎಕರೆ 09ಗುಂಟೆ ವಿಸ್ತೀರ್ಣದ ಜಮೀನಿನಲ್ಲಿನ ವಸತಿ ವಿನ್ಯಾಸ ನಕ್ಷೆಗೆ ಕರ್ನಾಟಕ ನಗರ ಮತ್ತು ಗ್ರಾಮಾಂತರ ಯೋಜನಾ ಕಾಯ್ದೆ 1961ರ ಕಲಂ 17(2ಬಿ) ರ ಅಡಿಯಲ್ಲಿ ಈ ಕೆಳಕಂಡ ನಿಬಂಧನೆಗಳಿಗೊಳಪಟ್ಟು ಅಂತಿಮ ಅನುಮೋದನೆ ನೀಡಿ, ವಸತಿ ವಿನ್ಯಾಸದಲ್ಲಿನ ಎಲ್ಲಾ ನಿವೇಶನಗಳನ್ನು ನೋಂದಣಿಗಾಗಿ ಬಿಡುಗಡೆ ಮಾಡಲಾಗಿದೆ.

**ಷರತ್ತುಗಳು**

1. ಅಂತಿಮ ಅನುಮೋದನೆಯಾದ ವಿನ್ಯಾಸದಲ್ಲಿ ಪ್ರಾಧಿಕಾರದ ಪೂರ್ವಾನುಮತಿ ಇಲ್ಲದೇ ಯಾವುದೇ ಬದಲಾವಣೆಗಳನ್ನು ಮಾಡತಕ್ಕದಲ್ಲ.
2. ಈ ಪ್ರದೇಶದಲ್ಲಿ ಹಾಲಿ ಇರುವ ಗಿಡಮರಗಳನ್ನು ಸಾಧ್ಯವಾದಷ್ಟು ಮಟ್ಟಿಗೆ ಉಳಿಸಿಕೊಳ್ಳತಕ್ಕದ್ದು ಮತ್ತು ರಸ್ತೆಗಳ ಎರಡೂ ಕಡೆ ಹಾಗೂ ಉದ್ಯಾನವನಗಳಲ್ಲಿ ಹೊಸ ಸಸಿಗಳನ್ನು ಬೆಳೆಸುವುದು.
3. ಅನುಮೋದಿತ ವಿನ್ಯಾಸದಲ್ಲಿರುವ ರಸ್ತೆಗಳು, ಉದ್ಯಾನವನವನ್ನು ಈ ಪ್ರಾಧಿಕಾರದಿಂದ ತಿಳಿಸುವವರೆಗೆ ನಿರ್ವಹಣೆಯನ್ನು ಮಾಡತಕ್ಕದ್ದು ಹಾಗೂ ಕಾಯ್ದಿರಿಸಿದ ಪ್ರದೇಶಗಳನ್ನು ಒತ್ತುವರಿಯಾಗದಂತೆ ಸಂರಕ್ಷಿಸತಕ್ಕದ್ದು.
4. ಸದರಿ ವಿನ್ಯಾಸದಲ್ಲಿ ಘನತ್ಯಾಜ್ಯ ನಿರ್ವಹಣೆಗಾಗಿ ಪ್ರತ್ಯೇಕ ಸ್ಥಳ ಕಾಯ್ದಿರಿಸತಕ್ಕದ್ದು.
5. ವಿನ್ಯಾಸದಲ್ಲಿನ ರಸ್ತೆಗಳಿಂದ ಅಕ್ಕ-ಪಕ್ಕದ ಜಮೀನುಗಳಿಗೆ ಇರುವ ಸಂಪರ್ಕವನ್ನು ಯಾವುದೇ ಕಾರಣಕ್ಕೂ ನಿರ್ಬಂಧಿಸತಕ್ಕದ್ದಲ್ಲ.
6. ಸದರಿ ಅನುಮೋದನೆಯನ್ನು ಸಲ್ಲಿಸಿರುವ ದಾಖಲೆಗಳ ಆಧಾರದ ಮೇಲೆ ತಾಂತ್ರಿಕವಾಗಿ ಪರಿಶೀಲಿಸಿ ಅನುಮೋದನೆ ನೀಡಿರುವುದರಿಂದ ಸದರಿ ಅನುಮೋದನೆಯನ್ನು ಮಾಲೀಕತ್ವದ ದಾಖಲೆಯೆಂದು ದೃಢಪಡಿಸಿಕೊಳ್ಳಲು ಉಪಯೋಗಿಸತಕ್ಕದ್ದಲ್ಲ.
7. ಸದರಿ ಜಮೀನಿಗೆ ಸಂಬಂಧಿಸಿದಂತೆ ಯಾವುದೇ ಸಿವಿಲ್ ವ್ಯಾಜ್ಯಗಳಿಗೆ ಪ್ರಾಧಿಕಾರವು ಜವಾಬ್ದಾರಿಯಾಗಿರುವುದಿಲ್ಲ.
8. ಈ ವಿನ್ಯಾಸದಲ್ಲಿ ಬರುವ ನಿವೇಶನಗಳ ಮಾರಾಟ ಸಂಬಂಧ ನೀಡುವ ಜಾಹೀರಾತಿನಲ್ಲಿ ಪ್ರಾಧಿಕಾರದಿಂದ ಅನುಮೋದನೆ ಆಗಿರುವ ಅನುಮೋದನೆ ಸಂಖ್ಯೆ ಮತ್ತು ದಿನಾಂಕವನ್ನು ಕಡ್ಡಾಯವಾಗಿ ನಮೂದಿಸತಕ್ಕದ್ದು.
9. ನೈಸರ್ಗಿಕವಾಗಿ ಹರಿಯುವ ನದಿ/ಹಳ್ಳ/ಕೆರೆ ಮುಂತಾದವುಗಳಿಗೆ ವಿನ್ಯಾಸದ ಯಾವುದೇ ಮಲಿನ ನೀರನ್ನು ಬಿಡಬಾರದು.
10. ಈ ಅನುಮೋದಿತ ವಸತಿ ವಿನ್ಯಾಸ ನಕ್ಷೆ ಪ್ರದೇಶದಲ್ಲಿ ಬರುವ 'ಬಿ' ಖರಾಬು ಜಮೀನುಗಳು ಸರ್ಕಾರಕ್ಕೆ ಸೇರಿರುತ್ತದೆ. ಈ ಜಮೀನುಗಳನ್ನು ಯಥಾಸ್ಥಿತಿಯಂತೆ ಕಾಪಾಡತಕ್ಕದ್ದು ಹಾಗೂ ಅತಿಕ್ರಮಣ ಮಾಡಬಾರದು ಮತ್ತು ಇತರೆ ಉದ್ದೇಶಗಳಿಗಾಗಿ ಉಪಯೋಗಿಸತಕ್ಕದ್ದಲ್ಲ.
11. ಸದರಿ ವಿನ್ಯಾಸದ ಸುತ್ತಲೂ ಕಾಂಪೌಂಡ್ ನಿರ್ಮಿಸಿ ಗೇಟ್ ಅನ್ನು ಅಳವಡಿಸಿ ಗೇಟೆಡ್ ಕಮ್ಯೂನಿಟಿ ಎಂಬ ಹೆಸರಿನಲ್ಲಿ ನಿವೇಶನಗಳನ್ನು ಮಾರಾಟ ಮಾಡುವುದನ್ನು ನಿಷೇಧಿಸಲಾಗಿದೆ ಹಾಗೂ ಸದರಿ ವಿನ್ಯಾಸದಲ್ಲಿನ ರಸ್ತೆ, ಪಾದಾಚಾರಿ ಮಾರ್ಗ ಹಾಗೂ ಉದ್ಯಾನವನಗಳು ಸಾರ್ವಜನಿಕ ಸ್ವತ್ತಾಗಿರುತ್ತದೆ. ಆದ್ದರಿಂದ, ಸಾರ್ವಜನಿಕ ಸ್ವತ್ತುಗಳನ್ನು ಸಾರ್ವಜನಿಕರಿಗೆ ಮುಕ್ತವಾಗಿಡತಕ್ಕದ್ದು.

..4..

12. ಬಡಾವಣೆ ನಕ್ಷೆಗೆ ಸಲ್ಲಿಸಿರುವ ದಾಖಲೆಗಳ ಆಧಾರದ ಮೇಲೆ ಅನುಮೋದನೆ ನೀಡಿರುವುದರಿಂದ ಮುಂದಿನ ದಿನಗಳಲ್ಲಿ ಸದರಿ ಜಮೀನುಗಳ ಮಾಲೀಕತ್ವಕ್ಕೆ ಸಂಬಂಧಿಸಿದಂತೆ ತಂಟೆ ತಕರಾರು ಅಥವಾ ಸಿವಿಲ್ ವ್ಯಾಜ್ಯಗಳು ಉದ್ಭವವಾದಲ್ಲಿ ಬಡಾವಣೆ ಮಾಲೀಕರೇ ಹೊಣೆಗಾರರಾಗಿರುತ್ತಾರೆ.
13. ವಿನ್ಯಾಸ ಅನುಮೋದನೆ ಕೋರಿಕೆ ಸಂಬಂಧ ಸಲ್ಲಿಸಲಾಗಿರುವ ದಾಖಲೆ ಅಥವಾ ಬೇರೆ ಯಾವುದೇ ಮಾಹಿತಿಗಳು ತಪ್ಪಾಗಿದ್ದಲ್ಲಿ, ವಸತಿ ವಿನ್ಯಾಸಕ್ಕೆ ನೀಡಿರುವ ಈ ಅನುಮೋದನೆಯು ಯಾವ ಪೂರ್ವ ಸೂಚನೆಯೂ ಇಲ್ಲದೇ ತಂತಾನೆ ರದ್ದಾಗುತ್ತದೆ.
14. ಈ ಪ್ರಾಧಿಕಾರದ ಪೂರ್ವಾನುಮತಿ ಪಡೆಯದೇ ಈ ವಸತಿ ವಿನ್ಯಾಸದಲ್ಲಿ ಯಾವುದೇ ಬದಲಾವಣೆಯನ್ನು ಮಾಡಬಾರದು ಹಾಗೂ ಅನುಮೋದನೆ ನೀಡಲಾದ ನಿರ್ದಿಷ್ಟ ಬಳಕೆಗೆ ಮಾತ್ರ ಉಪಯೋಗಿಸತಕ್ಕದ್ದು.
15. ಈ ವಿನ್ಯಾಸದಲ್ಲಿನ ಉದ್ಯಾನವನ ಮತ್ತು ರಸ್ತೆಗಳು ಸಾರ್ವಜನಿಕ ಸ್ವತ್ತಾಗಿರುತ್ತದೆ ಆದ್ದರಿಂದ ಈ ಸಾರ್ವಜನಿಕ ಸ್ವತ್ತುಗಳನ್ನು ಸಾರ್ವಜನಿಕರಿಗೆ ಮುಕ್ತವಾಗಿಡತಕ್ಕದ್ದು
16. ಅನುಮೋದಿತ ವಸತಿ ವಿನ್ಯಾಸದ ನಿವೇಶನಗಳಲ್ಲಿ ನಿರ್ಮಿಸುವ ಕಟ್ಟಡಗಳಲ್ಲಿ ಮಳೆ ನೀರು ಸಂಗ್ರಹಣೆಯನ್ನು ಕಡ್ಡಾಯವಾಗಿ ಅಳವಡಿಸುವುದು ಮತ್ತು ವಿನ್ಯಾಸದಲ್ಲಿ ಅಂತರ್ಜಲ ವೃದ್ಧಿಗೆ ಅಗತ್ಯ ಕ್ರಮಗಳನ್ನು ಕೈಗೊಳ್ಳುವುದು.
17. ವಿನ್ಯಾಸದಲ್ಲಿನ ರಸ್ತೆಗಳಿಂದ ಅಕ್ಕ-ಪಕ್ಕದ ಜಮೀನುಗಳಿಗೆ ಸಂಪರ್ಕವನ್ನು ಯಾವುದೇ ಕಾರಣಕ್ಕೂ ನಿರ್ಬಂಧಿಸತಕ್ಕದ್ದಲ್ಲ.
18. ಪ್ರಸ್ತಾವಿತ ಜಮೀನುಗಳು ಯಾವುದೇ ಭೂ ಸ್ವಾಧೀನಕ್ಕೆ ಒಳಪಟ್ಟಿದ್ದಲ್ಲಿ ಈ ಪ್ರಾಧಿಕಾರವು ಜವಬ್ದಾರಿಯಾಗಿರುವುದಿಲ್ಲ.
19. ಒಂದು ವೇಳೆ ಸರ್ಕಾರವು ಪೂರ್ವಾನ್ವಯವಾಗುವಂತೆ ನಿಗಧಿಪಡಿಸುವ ಇತರೆ ಯಾವುದೇ ಶುಲ್ಕಗಳನ್ನು ಅರ್ಜಿದಾರರು ಪ್ರಾಧಿಕಾರಕ್ಕೆ ಪಾವತಿಸತಕ್ಕದ್ದು.
20. ವಿನ್ಯಾಸದಲ್ಲಿ ನಿವೇಶನಗಳ ಮಾರಾಟ ಕುರಿತಂತೆ ನೀಡುವ ಜಾಹೀರಾತಿನಲ್ಲಿ ಯೋಜನಾ ಪ್ರಾಧಿಕಾರದ ಹೆಸರು, ಅನುಮೋದನೆ ಸಂಖ್ಯೆ ಮತ್ತು ವಿವರಗಳನ್ನು ಸ್ಪಷ್ಟವಾಗಿ ನಮೂದಿಸತಕ್ಕದ್ದು.
21. ಸರ್ಕಾರದ ಸುತ್ತೋಲೆ ಸಂಖ್ಯೆ: ನಅಇ/209/ಬಿಎಂಆರ್/2016, ದಿನಾಂಕ: 31/03/2017ರ ರೀತ್ಯ ಪತ್ರಿಕೆ, ಮಾಧ್ಯಮ ಜಾಹೀರಾತು ಪ್ರಕಟಣೆಗಳಲ್ಲಿ ಬೆಂಗಳೂರು ಮಹಾನಗರ ಪ್ರದೇಶಾಭಿವೃದ್ಧಿ ಪ್ರಾಧಿಕಾರದ ಹೆಸರನ್ನು ದುರ್ಬಳಕೆ ಮಾಡಿಕೊಳ್ಳುವಂತಿಲ್ಲ. ತಪ್ಪು ಮಾಹಿತಿ ಪ್ರಕಟಿಸದೇ ಅನುಮೋದನೆ ಪಡೆದುಕೊಂಡಿರುವ ಯೋಜನಾ ಪ್ರಾಧಿಕಾರದ ಹೆಸರನ್ನು ಮಾತ್ರ ನಮೂದಿಸತಕ್ಕದ್ದು.
22. ಮೇಲ್ಕಂಡ ಯಾವುದೇ ಷರತ್ತುಗಳನ್ನು ಹಾಗೂ ಇತರೆ ಯಾವುದೇ ಪ್ರಾಧಿಕಾರವು ವಿಧಿಸಿರುವ ಷರತ್ತುಗಳನ್ನು ಉಲ್ಲಂಘಿಸಿದಲ್ಲಿ ಪ್ರಾಧಿಕಾರವು ನೀಡಿರುವ ಮಂಜೂರಾತಿಯು ಕೂಡಲೇ ರದ್ದಾಗುವುದು.

Thippeswamy 15/12/2017

ಸದಸ್ಯ-ಕಾರ್ಯದರ್ಶಿಗಳು
ಗ್ರೇಟರ್ ಬೆಂಗಳೂರು - ಬಿಡದಿ ಸ್ಮಾರ್ಟ್
ಸಿಟಿ ಯೋಜನಾ ಪ್ರಾಧಿಕಾರ ಹಾಗೂ ಮಹಾನಗರ
ಯೋಜಕರು, ಬೆಂ.ಮ.ಪ್ರ.ಪ್ರಾ
ಬೆಂಗಳೂರು.

**ಇವರಿಗೆ,**
**ಶ್ರೀ ಕೆ.ಎಸ್. ರಾಘವೇಂದ್ರ ನಾಯಕ್,**
ಮೆ: ಯುನಿವರ್ಸಲ್ ಡೆವಲಪರ್ಸ್,
ನಂ.872, ಜಿ-1, ಹೆಚ್.ಎ. ಆರ್ಕಿಡ್,
17ನೇ ಮುಖ್ಯರಸ್ತೆ, 6ನೇ ಬ್ಲಾಕ್, ಕೋರಮಂಗಲ,
ಬೆಂಗಳೂರು-560 095.